ಈ) ಜಿಲ್ಲೆಯ ಬಹುತೇಕ ಪಶುವೈದ್ಯ ಆಸ್ಪತ್ರೆ ಹಾಗೂ ಪಶುಚಿಕಿತ್ಸಾಲಯಗಳಲ್ಲಿ ವೈದ್ಯರು ಹಾಗೂ ಸಿಬ್ಬಂದಿ ಕೊರತೆ ಇರುವುದು ನಿಜವಲ್ಲವೇ (ಪೂರ್ಣ ವಿವರಗಳನ್ನು ಒದಗಿಸುವುದು) ?

ಉ) ಈ ಕೊರತೆಯನ್ನು ನೀಗಲು ಸರ್ಕಾರದ ಮುಂದಿರುವ ಕ್ರಮಗಳೇನು ?

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು) :

ಅ) 5 ಪಶುಆಸ್ಪತ್ರೆಗಳು : 41 ಪಶುಚಿಕಿತ್ಸಾಲಯಗಳು ಜಿಲ್ಲೆಯಲ್ಲಿ ಕೆಲಸ ನಿರ್ವಹಿಸುತ್ತಿವೆ. ಕ್ಷೇತ್ರವಾರು ಮಾಹಿತಿ ಅನುಬಂಧ-1 ರಲ್ಲಿ ನೀಡಲಾಗಿದೆ.

ಆ) ಹೊಸ ಪಶುಆಸ್ಪತ್ರೆಗಳನ್ನಾಗಲೀ ಪಶುಚಿಕಿತ್ಸಾಲಯಗಳನ್ನಾಗಲೀ ಆರಂಭಿಸಲಾಗಿಲ್ಲ. ಆದಾಗ್ಯೂ 11 ಪ್ರಾಥಮಿಕ ಪಶು ಚಿಕಿತ್ಸಾಲಯಗಳನ್ನು ಪಶುಚಿಕಿತ್ಸಾಲಯಗಳನ್ನಾಗಿ ಕಳೆದ 3 ವರ್ಷಗಳಲ್ಲಿ ಬೀದರ್ ಜಿಲ್ಲೆಯಲ್ಲಿ ಮೇಲ್ದರ್ಜೆಗೇರಿಸಲಾಗಿದೆ. ಪಶುಚಿಕಿತ್ಸಾಲಯಗಳನ್ನು ಪಶುಆಸ್ಪತ್ರೆಗಳನ್ನಾಗಿ ಮೇಲ್ದರ್ಜೆಗೇರಿಸುವ ಕಾರ್ಯಕ್ರಮ ಸರ್ಕಾರದ ಮುಂದೆ ಇರುವುದಿಲ್ಲ. ವಿವರ ಅನುಬಂಧ-2 ರಲ್ಲಿ ನೀಡಲಾಗಿದೆ.

ಇ) ಸರ್ಕಾರದ ಮುಂದೆ ಯಾವುದೇ ಗ್ರಾಮದಲ್ಲಿ ಹೊಸ ಪಶುಆಸ್ಪತ್ರೆಗಳಾಗಲೀ, ಪಶುಚಿಕಿತ್ಸಾಲಯಗಳಾಗಲೀ ಪ್ರಾರಂಭಿಸುವ ಪ್ರಸ್ತಾವನೆ ಇರಲಿಲ್ಲ. ಪ್ರಸ್ತುತ ಸಾಲಿನಲ್ಲಿ ಸರ್ಕಾರದ ಮುಂದೆ ರಾಜ್ಯದಲ್ಲಿ 200 ಪ್ರಾಥಮಿಕ ಪಶುಚಿಕಿತ್ಸಾಲಯಗಳನ್ನು ಪಶು ಚಿಕಿತ್ಸಾಲಯಗಳನ್ನಾಗಿ ಮೇಲ್ದರ್ಜೆಗೇರಿಸುವ ಕಾರ್ಯಕ್ರಮ ಮಾತ್ರ ಇದೆ. ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರದಿಂದ ಪಶು ಚಿಕಿತ್ಸಾಲಯಗಳನ್ನಾಗಿ ಮೇಲ್ದರ್ಜೆಗೇರಿಸುವ ಸಂಸ್ಥೆಗಳ ಪಟ್ಟಿಯನ್ನು ಸದ್ಯದಲ್ಲಿಯೇ ಅಂತಿಮಗೊಳಿಸಲಾಗುವುದು.

ಈ) ಹೌದು, ಪಶುವೈದ್ಯರ ಹಾಗೂ ಸಹಾಯಕ ಸಿಬ್ಬಂದಿ ಕೊರತೆ ಇದೆ. ಜಿಲ್ಲೆಯ ಮಾಹಿತಿ ಅನುಬಂಧ-3 ರಲ್ಲಿ ನೀಡಲಾಗಿದೆ.

ಉ) ಸರ್ಕಾರವು ಕಾಲಕಾಲಕ್ಕೆ ಖಾಲಿ ಹುದ್ದೆಗಳನ್ನು ಮುಂಬಡ್ತಿಯಿಂದ ಮತ್ತು ನೇರ ನೇಮಕಾತಿಯಿಂದ ತುಂಬಲಾಗುತ್ತದೆ.

ಬೀದರ್ ಜಿಲ್ಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ವಸತಿನಿಲಯಗಳ ನಿರ್ವಹಣೆ

1145 (1489) ಶ್ರೀ ರಾಜೇಂದ್ರ ವರ್ಮ (ಹುಲ್‌ಸೂರ್) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯು ಯಾವ ಯಾವ ವರ್ಗಗಳ ವಿದ್ಯಾರ್ಥಿನಿಲಯಗಳನ್ನು ನಿರ್ವಹಣೆ ಮಾಡುತ್ತಿದೆ. ಕಳೆದ 3 ವರ್ಷಗಳಲ್ಲಿ ಇವುಗಳ ನಿರ್ವಹಣೆಗಾಗಿ ಪ್ರತಿ ವರ್ಷ ವೆಚ್ಚ ಮಾಡಲಾದ ಹಣದ ಮೊತ್ತವೆಷ್ಟು ; (ವಿಧಾನಸಭಾ ಕ್ಷೇತ್ರಾವಾರು ವಿವರ ಒದಗಿಸುವುದು) ಮತ್ತು ಇದೇ ಅವಧಿಯಲ್ಲಿ ಜಿಲ್ಲೆಯಲ್ಲಿ ಇಲಾಖೆಯಿಂದ ಯಾವ ಗ್ರಾಮಗಳಲ್ಲಿ ಯಾವ ವರ್ಗದ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸುವ ಬಗ್ಗೆ ಪ್ರಸ್ತಾವನೆ ಸರ್ಕಾರದ ಮುಂದಿತ್ತು ; ಇವುಗಳ ಪೈಕಿ ಯಾವ ಸ್ಥಳಗಳಲ್ಲಿ ಯಾವ ವರ್ಗದ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲಾಗಿದೆ ?

ಆ) ಜಿಲ್ಲೆಯಲ್ಲಿ ಇಲಾಖೆಯಿಂದ ನಡೆಸಲ್ಪಡುತ್ತಿರುವ ವಿವಿಧ ವರ್ಗಗಳ ವಿದ್ಯಾರ್ಥಿನಿಲಯಗಳಲ್ಲಿ ವಿದ್ಯಾರ್ಥಿಗಳಿಗೆ ಕಳಪೆ ದರ್ಜೆಯ ಆಹಾರ ಮತ್ತು ಮೂಲಭೂತ

ಸೌಲಭ್ಯಗಳನ್ನು ಪೂರೈಸುವ ಮೂಲಕ ತೀವ್ರವಾದ ಭ್ರಷ್ಟಾಚಾರ ನಡೆದಿರುವುದನ್ನು ಲೋಕಾಯುಕ್ತರು ಬೀದರ್‌ಗೆ ಭೇಟಿ ನೀಡಿದ ಸಂದರ್ಭದಲ್ಲಿ ಪತ್ತೆ ಮಾಡಿರುವುದು ನಿಜವಲ್ಲವೆ ; ಹಾಗಿದ್ದಲ್ಲಿ ಮೇಲ್ಕಂಡ ಅವಧಿಯಲ್ಲಿ ಜಿಲ್ಲೆಯ ವಿದ್ಯಾರ್ಥಿ ವಸತಿ ನಿಲಯಗಳ ನಿರ್ವಹಣೆ ವೆಚ್ಚ ಮಾಡಿರುವ ಹಣದ ಬಗ್ಗೆ ವಿವರವಾದ ತನಿಖೆಗೆ ಸರ್ಕಾರವು ಆದೇಶ ನೀಡುವುದೇ ?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ವಿವರವನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.

ಆ) ಲೋಕಾಯುಕ್ತವು ಬೀದರ್ ಜಿಲ್ಲೆಯಲ್ಲಿರುವ ಇಲಾಖೆಯ ವಿದ್ಯಾರ್ಥಿನಿಲಯಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ವಿದ್ಯಾರ್ಥಿನಿಲಯಗಳ ಕೆಲವೊಂದು ನ್ಯೂನತೆಗಳನ್ನು ಸರಿಪಡಿಸಲಾಗಿದೆ. ವಿದ್ಯಾರ್ಥಿನಿಲಯಗಳಲ್ಲಿ ಯಾವುದೇ ಭ್ರಷ್ಟಾಚಾರ ನಡೆದಿರುವುದಿಲ್ಲ.

Annexure-1

Social Welfare Department

Social Welfare Department is maintaining, Scheduled Caste hostel in Bidar District Consitutency-wise amount spent for the previous three years towards maintenance of hostel are as follows :

Sl. No.	Vidhana Sabha Constituency Wise Details	1999-2000	2000-01	2001-02
1.	Aurad	16,82,577	19,81,842	14,05,225
2.	Bidar	39,38,600	57,89,900	49,10,792
3.	Bhalki	34,74,123	32,62,028	33,12,040
4.	Hulsur	25,33,504	25,03,675	24,70,633
5.	Basava Kalyana	32,57,155	31,30,593	25,07,249
6.	Humnabad	37,13,110	43,18,155	38,28,192
	Total	**1,85,99,069**	**2,09,86,193**	**1,84,34,131**

During this period the details of proposal received and out of which number of hostels are sanctioned as detailed below :

Proposal for New **Hostels**	Sanctioned for Out of Which the details of **Number of Hostels Sanctioned**
Bhalki Constituency	
Pre-matric Boys Hoste, Halbarga	-
Aurad Constituency	
Pre-matric Girls Hostel, Kamalanagar	-
Pre-matric Boys Hostel, Kollura	-
Pre-matric Boys Hostel, Hedagapura	-

Pre-matric Boys Hostel, Dabaka Sanctioned and Started
Post-matric Boys Hostel, Kamalanagar -
post-matric Boys Hostel, Santapura Sanctioned and Started

Bidar Constituency

Pre-matric Girls Hostel, Kamatana -
Pre-matric Boys Hostel, Mannalli -
Pre-matric Girls Hostel, Ranjolakeni -

Humnabad Constituency

Pre-matric Boys Hostel, Halikheda (K) -
Pre-matric Boys Hostel, Changalera -
Post-matric Boys Hostel, Manavakelhi -
Post-matric Boys Hostel, Halikheda (B)-
Post-matric Boys Hostel, Chitaguppa -

Basavakalyana Constituency

Pre-matric Boys Hostel, Muchalam -

Besides the following two hostels for Scheduled Castes were also sanctioned :

1) Post-matric Girls Hostel, Mudhol, Aurad Taluk
2) Post-matric Girls Hostel, Bidar Town

Tribal Welfare Department :

There are Two Scheduled Tribe Pre-matric Boys hostels maintained by Scheduled Tribe Welfare Department in Bidar District. The amount spent year-wise during the last 3 years are as follows :

Sl. No.	Vidhana Sabha Constituency-Wise Details	1999-2000	2000-01	2001-02
1.	Basavakalyana Pre-matric Boys Hostel, Mantala	--	--	53,236

Another Scheduled Tribe Pre-matric Boys hostel at Humnabadh Coming under Humnabadh Constituency is sanctioned during the year 2002-03

In the last three years there was no proposal before the Government to start Scheduled Tribe Pre-matric Boys Hostels in Bidar District.

Backward Classes Department

Sl. No.	Vidhana Sabha Constituency Wise Details	1999-2000	2000-01	2001-02
1.	Aurad	39.62	42.89	44.51
2.	Bidar	46.18	46.61	49.66
3.	Bhalki	21.81	24.50	25.37
4.	Hunsur	7.60	8.00	7.75
5.	Basava Kalyana	56.38	53.08	59.12
6.	Humnabad	27.71	29.44	31.24
	Total	**199.30**	**204.52**	**217.47**

Minorities Department

The Department of Minorities is running per-matric hostel in Bidar since 2001-02. The year-wise expenditure to this hostel towards maintenance is as follows :

Government Pre-matric Minorities Girls Hostel, Bidar

1) 2001-02 - Rs. 3.24 lakhs

2) 2002-03 - Rs. 5.00 lakhs

No proposal for starting of new hostels in this Department.

ಬೀದರ್ ಜಿಲ್ಲೆಯ ಸಕ್ಕರೆ ಕಾರ್ಖಾನೆಗಳು ಸಾಧಿಸಿರುವ ಪ್ರಗತಿ

1146 (1490) ಶ್ರೀ ರಾಜೇಂದ್ರ ವರ್ಮ (ಹುಲ್‌ಸೂರ್) ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿ ಇರುವ ಸಕ್ಕರೆ ಕಾರ್ಖಾನೆಗಳ ಸಂಖ್ಯೆ ಎಷ್ಟು ಹಾಗೂ ಪ್ರಸಕ್ತ ಸಾಲಿನಲ್ಲಿ ಎಷ್ಟು ಹೊಸ ಸಕ್ಕರೆ ಕಾರ್ಖಾನೆಗಳು ಕಾರ್ಯಾರಂಭ ಮಾಡಿವೆ ಇವುಗಳ ಕಬ್ಬು ಅರೆಯುವಿಕೆ ಸಾಮರ್ಥ್ಯವೆಷ್ಟು ; ಇವುಗಳ ಪೈಕಿ ಎಷ್ಟು ಸಕ್ಕರೆ ಕಾರ್ಖಾನೆಗಳು ಸಹ-ವಿದ್ಯುತ್ ಘಟಕ ಹಾಗೂ ಡಿಸ್ಟಿಲರಿ ಸ್ಥಾಪನೆಗಾಗಿ ಅನುಮತಿಯನ್ನು ಪಡೆದುಕೊಂಡಿವೆ, ಇವುಗಳ ಸಿಬ್ಬಂದಿ ಸಂಖ್ಯೆ ಎಷ್ಟು ?

ಆ) ಜಿಲ್ಲೆಯಲ್ಲಿ ಇರುವ ಖಾಸಗಿ ಸಕ್ಕರೆ ಕಾರ್ಖಾನೆಗಳು ಹಾಗೂ ಖಂಡಸಾರಿ ಘಟಕಗಳ ಸಂಖ್ಯೆ ಎಷ್ಟು ; ಹಾಗೂ ಇವುಗಳ ಸಾಮರ್ಥ್ಯವೆಷ್ಟು ಇವುಗಳ ಮಾಲೀಕರು ಯಾರು (ಹೆಸರು ವಿವರಗಳನ್ನು ಒದಗಿಸುವುದು) ಇವುಗಳ ಪೈಕಿ ಎಷ್ಟು ಸಹ-ವಿದ್ಯುತ್ ಘಟಕ ಮತ್ತು ಡಿಸ್ಟಿಲರಿಗಳನ್ನು ಹೊಂದಿವೆ ಇಲ್ಲವೇ ಅನುಮತಿಗಾಗಿ ಸರ್ಕಾರಕ್ಕೆ ಅರ್ಜಿ ಸಲ್ಲಿಸಿದೆ ?

ಇ) ಜಿಲ್ಲೆಯಲ್ಲಿಯಿರುವ ಸಹಕಾರಿ ಸಕ್ಕರೆ ಕಾರ್ಖಾನೆಗಳು ಹಾಗೂ ಖಾಸಗಿ ಸಕ್ಕರೆ ಕಾರ್ಖಾನೆಗಳು ಮತ್ತು ಖಂಡಸಾರಿ ಘಟಕಗಳಿಗೆ ಅಗತ್ಯವಾಗುವಷ್ಟು ಕಬ್ಬು ದೊರೆಕುತ್ತಿದೆಯೇ ;